# ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಸಾಗರ

## ಸಿ.ಸಿ. ನಂ.96/2025

| | | |
|---|---|---|
| ಸಾಕ್ಷಿದಾರರ ಹೆಸರು | ಜಯಂತ ಎಂ | |
| ತಂದೆಯ ಹೆಸರು | ಮಂಜಪ್ಪ | ಡಿ .ಡಬ್ಲ್ಯೂ-1 |
| ವಯಸ್ಸು | 36 ವರ್ಷ | ಪ್ರಮಾಣೀಕರಿಸಿದ |
| ಉದ್ಯೋಗ | ಬಿಲ್ ಕಲೆಕ್ಟರ್ | ದಿನಾಂಕಃ |
| ವಾಸಃ | ಕೆಳದಿಪುರ | 08.07.2026 |

**ಮೌಖಿಕ ಮುಖ್ಯ ವಿಚಾರಣೆಃ ಆರೋಪಿತನ ವಕೀಲರಾದ ಶ್ರೀ ಕೆ.ಹೆಚ್.ಆರ್ ರವರಿಂದಃ**

1. ಫಿರ್ಯಾದಿ ನನಗೆ ಗೊತ್ತಿಲ್ಲ. ನನ್ನ ಮತ್ತು ಫಿರ್ಯಾದಿ ನಡುವೆ ಯಾವುದೇ ಹಣದ ವ್ಯವಹಾರ ನಡೆದಿಲ್ಲ. ಅವನು ನನಗೆ ಪರಿಚಯವೂ ಇಲ್ಲ. ನಾನು ಎಸ್ ಪಿ ಅರವಿಂದರವರಿಂದ ಜೂನ್ 2021 ರಲ್ಲಿ 30 ಸಾವಿರ ರೂ. ಗಳನ್ನು ಸಾಲವಾಗಿ ಪಡೆದಿದ್ದೆ. ಸಾಲದ ಪಡೆದ 3 ತಿಂಗಳ ನಂತರ ಸೆಪ್ಟೆಂಬರ್ ನಲ್ಲಿ ಅದನ್ನು ಎಸ್ ಪಿ ಅರವಿಂದರವರಿಗೆ ವಾಪಸ್ಸು ನೀಡಿದ್ದೇನೆ. ನವೆಂಬರ್ 2021 ರಲ್ಲಿ ಎಸ್ ಪಿ ಅರವಿಂದರವರ ಬಳಿ ಪುನಃ 50 ಸಾವಿರ ರೂ.ಗಳನ್ನು ಸಾಲವಾಗಿ ಪಡೆದಿದ್ದೆ. ಆ ಹಣವನ್ನು ನಾನು ಪಡೆಯುವಾಗ 35 ಗ್ರಾಂ 7 ಮಿಲಿ ತೂಕದ (ಮಾಂಗಲ್ಯ ಸರ, ಎರಡು ಚೈನ್ ಮತ್ತು ಒಂದು ಉಂಗುರ) ವನ್ನು ಆಧಾರ ಮಾಡಿದ್ದೆ. ನಾನು ಅವನೊಂದಿಗೆ ವ್ಯವಹಾರವನ್ನು ಉತ್ತಮ ರೀತಿಯಲ್ಲಿ ಮಾಡಿದ್ದರಿಂದ ಅವನ ಪರಿಚಯ ನನಗೆ ಆಯಿತು.

2. ಸದರಿ ಸಾಲವನ್ನು ನಾನು ಪ್ರತಿ ತಿಂಗಳು 5,000/- ರೂ.ಗಳಂತೆ ಸಂಪೂರ್ಣವಾಗಿ ಮರು ಪಾವತಿ ಮಾಡಿದ್ದೇನೆ. ನಂತರ ನಾನು ಆಧಾರ ಮಾಡಿದ್ದ 35 ಗ್ರಾಂ 7 ಮಿಲಿ ತೂಕದ ಚಿನ್ನದ ಆಭರಣಗಳನ್ನು ಎಸ್ ಪಿ ಅರವಿಂದರವರಿಂದ ವಾಪಸ್ಸು ಪಡೆಯಲು ಹೋದಾಗ ಒಂದು ವಾರದ ನಂತರ ಕೊಡುವುದಾಗಿ ಹೇಳಿದನು. ಪುನಃ ನಾನು ಆಭರಣಗಳನ್ನು ಕೇಳಲು ಹೋದಾಗ ಕಿರಣ ಎನ್ನುವವರ ಒಂದು ಚೆಕ್ ಅನ್ನು ನಿನ್ನ ಮೂಲಕ ಬ್ಯಾಂಕಿಗೆ ಹಾಜರು ಪಡಿಸಿ ಹಣವನ್ನು ವಸೂಲಿ ಮಾಡಿಕೊಡು ಎಂದು ಎಸ್ ಪಿ ಅರವಿಂದನು ಕೇಳಿದನು. ಆಗ ಎಸ್ ಪಿ ಅರವಿಂದನು ನನ್ನಿಂದ 4 ಚೆಕ್ಕುಗಳನ್ನು ಪಡೆದುಕೊಂಡನು. ಕಿರಣನ ವಿರುದ್ಧ ನನ್ನ ಮೂಲಕ ಚೆಕ್ ಬೌನ್ಸ್ ಕೇಸನ್ನು ದಾಖಲು ಮಾಡಿ ನಡೆಸುತ್ತಿದ್ದೆವು. ಸದರಿ ಪ್ರಕರಣದಲ್ಲಿ ಕಿರಣನು ನಿರಪರಾಧಿ ಎಂದು ಬಿಡುಗಡೆ ಆಯಿತು.

ನಂತರ ನಾನು ಆಧಾರ ಮಾಡಿದ್ದ ಚಿನ್ನದ ಆಭರಣಗಳನ್ನು ವಾಪಸ್ಸು ಕೊಡುವಂತೆ ವಾಪಸ್ಸು ಕೇಳಿದಾಗ ಅವನು ಕೊಡಲಿಲ್ಲ. ನಂತರ ಸಾಗರದ ಪೋಲಿಸ್ ಠಾಣೆಯಲ್ಲಿ ನಾನು ದೂರನ್ನು ನೀಡಿದ್ದೆ. ಪೋಲಿಸರು ವಿಚಾರಣೆ ಮಾಡಿದಾಗ ಎಸ್ ಪಿ ಅರವಿಂದನು ತನಗೆ ಯಾವುದೇ ಆಭರಣಗಳನ್ನು ನಾನು ನೀಡಿಲ್ಲ ಎಂದು ಪೋಲಿಸರ ಮುಂದೆ ಹೇಳಿದನು. ಆರೋಪಿತನಿಗೆ ನಾನು ಕಾನೂನುಬದ್ಧವಾಗಿ ಮರುಪಾವತಿ ಮಾಡಬೇಕಾದ ಯಾವುದೇ ಹಣ ಇಲ್ಲ.

**ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ  ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.